(ಇಂದು ದಿನಾಂಕ:**24/07/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಎಸ್.ಆರ್.ಪಿ. ವಕೀಲರಿಂದಃ-**

ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಮ್ಮ ಡಿಪೋದಿಂದ ನೀಡಿದ ಹಾಜರಾತಿ ಪುಸ್ತಕದ ವಿವರಗಳನ್ನು ಈಗ ನಿಆರ್-43 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಎಸ್.ಪಿ. (ಎಂ.ಎಚ್.ಬಿ.) ವಕೀಲರಿಂದಃ-**

ಎಸ್.ಬಿ.ಬಾಯಿಸರ್ಕಾರ ಎನ್ನುವ ಡಿಪೋ ಮ್ಯಾನೇಜರ ಈ ಕೇಸಿನಲ್ಲಿ ವರದಿ ಸಲ್ಲಿಸಿದ್ದಾರೆ. ನಾನು ವರದಿ ಸಲ್ಲಿಸಿಲ್ಲ. ಸದರಿಯವರು ನಿವೃತ್ತಿ ಹೊಂದಿದ್ದು, ಬೀಳಗಿಯಲ್ಲಿ ವಾಸಿಸುತ್ತಾರೆ. ಸಾಕ್ಷಿ ನುಡಿಯಲು ಸಂಸ್ಥೆಯವರು ನನಗೆ ಅಧಿಕಾರ ನೀಡಿರುತ್ತಾರೆ. ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಿಆರ್-43 ನ್ನು ನನ್ನ ಮುಂಚಿತ ಅಧಿಕಾರಿಯೇ ನೀಡಿರುತ್ತಾರೆ. ಅರ್ಜಿದಾರ ಆರೋಪಣೆಗಳಿಗೆ ಉತ್ತರ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಕೆ.ಐ.ಡಿ. ನಂ.75/2004 ರ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ನಮ್ಮ ಸಂಸ್ಥೆಯವರು ನೀಡಿದ ತಿಳುವಳಿಕೆ ಪತ್ರಕ್ಕೆ ಅರ್ಜಿದಾರ ಉತ್ತರ ಕೊಟ್ಟಿರಬಹುದು. ಪ್ರಕರಣದ ಬಗ್ಗೆ ಏನೂ ಮಾಹಿತಿ ಇಲ್ಲದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.